



**ಗದ್ಯ – 1** **ಒಣ ಮರದ ಗಿಳಿ**

## ಪ್ರಶ್ನೋತ್ತರಗಳು

### ಅ. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ:

**ಪ್ರಶ್ನೆ 1:**

**ಬೇಡನು ಪ್ರಾಣಿಗಳನ್ನು ಕೊಲ್ಲಲು ಮಾಡುತ್ತಿದ್ದ ಉಪಾಯವೇನು?**

**ಉತ್ತರ:**

ಪ್ರಾಣಿಗಳನ್ನು ಕೊಲ್ಲಲು ವಿಷ ಸವರಿದ ಬಾಣಗಳನ್ನು ಸಿದ್ಧ ಮಾಡಿಕೊಳ್ಳುವುದು ಬೇಡನ ಉಪಾಯವಾಗಿತ್ತು.

**ಪ್ರಶ್ನೆ 2:**

**ವಿಷದ ಬಾಣವು ಮರಕ್ಕೆ ಏಕೆ ತಗುಲಿತು?**

**ಉತ್ತರ:**

ಒಮ್ಮೆ ಒಂದು ಜಿಂಕೆಯನ್ನು ಬೇಡನು ಬೆನ್ನಟ್ಟಿದಾಗ ಅದು ಬಾಣದಿಂದ ತಪ್ಪಿಸಿಕೊಂಡು ದೂರ ಓಡಿತು. ಆದ ಕಾರಣ ವಿಷದ ಬಾಣವು ಮರಕ್ಕೆ ತಗುಲಿತು.

**ಪ್ರಶ್ನೆ 3:**

**ವಿಷದ ಬಾಣವು ಮರಕ್ಕೆ ತಗುಲಿದ್ದರಿಂದಾದ ಪರಿಣಾಮವೇನು?**

**ಉತ್ತರ:**

ವಿಷದ ಬಾಣವು ಮರಕ್ಕೆ ತಗುಲಿದ್ದರಿಂದ ಮರವು ಒಣಗಿ ನಿಂತಿತು.

**ಪ್ರಶ್ನೆ 4:**

**ಗಿಳಿಯನ್ನು ಕಂಡು ಇಂದ್ರನಿಗೆ ಆಶ್ಚರ್ಯವಾದದ್ದು ಏಕೆ?**

**ಉತ್ತರ:**

ಮರ ಒಣಗಿ ನಿಂತರೂ ಗಿಳಿಯು ಆ ಮರದ ಪೊಟರೆಯನ್ನು ಬಿಟ್ಟು ಹೋಗದೆ ಅಲ್ಲಿಯೇ ವಾಸ ಮಾಡುತ್ತಿರುವುದನ್ನು ಕಂಡು ಇಂದ್ರನಿಗೆ ಆಶ್ಚರ್ಯವಾಯಿತು.

**ಪ್ರಶ್ನೆ 5:**

**ಗಿಳಿಯ ಯಾವ ಗುಣವನ್ನು ಇಂದ್ರನು ಮೆಚ್ಚಿಕೊಂಡನು?**

**ಉತ್ತರ:**

ಗಿಳಿಯ ತತ್ವನಿಷ್ಠೆಯ ಗುಣವನ್ನು ಇಂದ್ರನು ಮೆಚ್ಚಿಕೊಂಡನು.

**ಪ್ರಶ್ನೆ 6:**

**ಇಂದ್ರನು ತನಗಾದ ಸಂತೋಷವನ್ನು ಯಾವ ರೀತಿ ಪ್ರಕಟಿಸಿದನು?**

**ಉತ್ತರ:**

ಗಿಳಿಗೆ ಬೇಕಾದ ವರವನ್ನು ಕೊಡುವುದರ ಮೂಲಕ ಇಂದ್ರನು ತನಗಾದ ಸಂತೋಷವನ್ನು ಪ್ರಕಟಿಸಿದನು.

## ಆ. ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ:

**ಪ್ರಶ್ನೆ 1:**

**ಮರವನ್ನು ಬಿಟ್ಟು ಹೋಗದೆ ಇರಲು ಗಿಳಿಯು ನೀಡಿದ ಸಮರ್ಥನೆ ಏನು?**

**ಉತ್ತರ:**

‘ಹಲವಾರು ವರ್ಷದಿಂದ ಮರ ತನಗೆ ಆಶ್ರಯ ಕೊಟ್ಟಿರುವುದಲ್ಲದೆ ಹಣ್ಣನ್ನು ಕೊಟ್ಟಿದೆ, ಹಸಿರು ಬಣ್ಣದಿಂದ ಮನಸ್ಸಿಗೆ ಮುದ ನೀಡಿದೆ, ನೆರಳು ನೀಡಿದೆ, ಆದರೆ ಈಗ ದುರದೃಷ್ಟದಿಂದ ಅದನ್ನು ರೋಗ, ಬಡತನಗಳು





ಕಿತ್ತು ತಿನ್ನುತ್ತಿವೆ. ಇಂತಹ ಸ್ಥಿತಿಯಲ್ಲಿ ಮರವನ್ನು ಕೈಬಿಟ್ಟು ಬೇರೆ ಕಡೆ ಹೋಗಿ ಮರಕ್ಕೆ ಕೃತಘ್ನನಾಗಲು ತನಗೆ ಇಷ್ಟವಿಲ್ಲ. ನಾನು ಎಲ್ಲೋ ಹೋಗಿ ಆಹಾರವನ್ನು ಸಂಪಾದಿಸಿಕೊಂಡು ಬರುತ್ತೇನೆ. ಆದರೆ ವಾಸ ಮಾತ್ರ ಇಲ್ಲೆ. ಸುಖ ಸಂಪತ್ತಿನ ಕಾಲದಲ್ಲಿ ಜತೆಗಿದ್ದವರು ದುರ್ಭರ ಗಳಿಗೆಯಲ್ಲಿಯೂ ಕೂಡ ಅವರ ಜೊತೆಗೇ ಇದ್ದು ಉಪಕಾರಸ್ಮರಣೆ ಮಾಡಬೇಕು' ಎಂದು ಗಿಳಿಯು ಸಮರ್ಥಿಸಿಕೊಂಡಿತು.

**ಪ್ರಶ್ನೆ 2:**

**ಸಾಮಾನ್ಯವಾದ ಲೋಕವರ್ತನೆ ಯಾವುದು?**

**ಉತ್ತರ:**

ಹಲವಾರು ವರ್ಷಗಳಿಂದ ಆಶ್ರಯ ಕೊಟ್ಟವರಿಗೆ ದುರದೃಷ್ಟ ಅಥವಾ ಆಪತ್ತು ಒದಗಿದಾಗ ಅವರನ್ನು ಕೈಬಿಟ್ಟು ಹೋಗಿ ಕೃತಘ್ನರೆನಿಸಿಕೊಳ್ಳುವುದು, ಸುಖ ಸಂಪತ್ತು ಇರುವಾಗ ಜೊತೆಯಲ್ಲಿದ್ದು ದುರ್ಭರ ಗಳಿಗೆಯಲ್ಲಿ ಅವರಿಂದ ದೂರವಾಗುವುದು, ಅವರು ಮಾಡಿದ ಉಪಕಾರ ಸ್ಮರಣೆ ಮಾಡದಿರುವುದು ಸಾಮಾನ್ಯ ಲೋಕವರ್ತನೆಯಾಗಿದೆ.

**ಪ್ರಶ್ನೆ 3:**

**ಗಿಳಿಯು ಇಂದ್ರನನ್ನು ಯಾವ ವರ ಕೇಳಿತು?**

**ಉತ್ತರ:**

'ತಾನು ವಾಸಿಸುತ್ತಿರುವ ಈ ಮರವು ಮೊದಲಿನಂತೆ ಹಸಿರಿನಿಂದ ನಳನಳಿಸುವ, ಫಲಪುಷ್ಪ ಭಾರದಿಂದ ಬೀಗುವ, ನೆರಳು ಕೊಡುವ ಮರವನ್ನಾಗುವಂತೆ ದಯಪಾಲಿಸಬೇಕೆಂದು' ಗಿಳಿಯು ಇಂದ್ರನಲ್ಲಿ ವರವನ್ನು ಕೇಳಿತು.





## ಗದ್ಯ – 1 ಒಣ ಮರದ ಗಿಳಿ

### ಇ. ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ:

**ಪ್ರಶ್ನೆ 1:**

**ಗಿಳಿಯು ಪರಹಿತಾಕಾಂಕ್ಷಿ ಎನಿಸಿಕೊಂಡದ್ದು ಹೇಗೆ?**

**ಉತ್ತರ:**

ಬೇಟೆಗಾರನ ವಿಷದ ಬಾಣದ ಪ್ರಭಾವದಿಂದ ಮರವೊಂದು ಒಣಗಿ ಅದರ ಪುಷ್ಪ ಸಮೃದ್ಧಿ, ಫಲ ಸಮೃದ್ಧಿ, ಹಸಿರಿನ ಸಿರಿ ಎಲ್ಲವೂ ಮಾಯವಾದವು. ಅಲ್ಲಿ ಬಹುಕಾಲದಿಂದ ವಾಸ ಮಾಡುತ್ತಿದ್ದ ಗಿಳಿಯೊಂದು ಮರ ಒಣಗಿ ನಿಂತರೂ ಅದರ ಪೊಟರೆಯನ್ನು ಬಿಟ್ಟು ಹೋಗಲಿಲ್ಲ. ಅದನ್ನು ನೋಡಿದ ಇಂದ್ರನಿಗೆ ಆಶ್ಚರ್ಯವಾಗಿ ಗಿಳಿಯನ್ನು ಕರೆದು ಇಂಥ ಒಣಮರದಲ್ಲಿ ವಾಸ ಮಾಡಲು ಕಾರಣವೇನೆಂದು ಕೇಳಿದನು. ಆಗ ಗಿಳಿಯು ಹಲವಾರು ವರ್ಷದಿಂದ ಈ ಮರ ತನಗೆ ಆಶ್ರಯ ನೀಡಿ, ಹಣ್ಣು ಕೊಟ್ಟು, ಹಸಿರು ಬಣ್ಣದಿಂದ ಮನಸ್ಸಿಗೆ ಮುದವನ್ನು ನೀಡಿದೆ. ಆದರೆ ಈಗ ದುರದೃಷ್ಟದಿಂದ ಅದನ್ನು ರೋಗ, ಬಡತನಗಳು ಕಿತ್ತು ತಿನ್ನುತ್ತಿವೆ. ಇಂತಹ ಸ್ಥಿತಿಯಲ್ಲಿ ಅದನ್ನು ಕೈಬಿಟ್ಟು ಹೋಗಿ ಮರಕ್ಕೆ ಕೃತಘ್ನನಾಗಲು ಇಷ್ಟವಿಲ್ಲ. ಸುಖ ಸಂಪತ್ತಿನ ಕಾಲದಲ್ಲಿ ಜೊತೆಗಿದ್ದವರು ದುರ್ಭರ ಗಳಿಗೆಯಲ್ಲಿ ಕೂಡ ಅವರು ಜೊತೆಗೇ ಇದ್ದು ಉಪಕಾರ ಸ್ಮರಣೆ ಮಾಡಬೇಕು. ಅದಕ್ಕೂ ಒಳ್ಳೆಯ ದಿನ ಬರಲಿ ಎಂದು ಹಾರೈಸಬೇಕೆಂಬ ಗಿಳಿಯ ಒಳ್ಳೆಯ ಗುಣದ ಈ ಮಾತುಗಳು ಪರಹಿತಾಕಾಂಕ್ಷಿ ಎನಿಸಿಕೊಂಡಿತು.

**ಪ್ರಶ್ನೆ 2:**

**ಗಿಳಿಯ ವರ್ತನೆಯಿಂದ ಮಾನವರಾದ ನಾವು ಕಲಿಯಬೇಕಾದ ಗುಣಗಳೇನು?**

**ಉತ್ತರ:**

ಪ್ರಸ್ತುತ ಪಾಠದಲ್ಲಿ ಗಿಳಿಯೊಂದರ ಕೃತಜ್ಞತಾಭಾವವನ್ನು ಮಾನವರು ಕಲಿಯಬೇಕು. ಪ್ರಕೃತಿಯನ್ನು ಪ್ರೀತಿಸಬೇಕು. ಹಸಿರಿನಿಂದ ಮನಸ್ಸಿಗೆ ಮುದ ನೀಡುವ ಮರಗಳನ್ನು ನಾಶಪಡಿಸುವಂತಹ ಕೆಟ್ಟ ಕೃತ್ಯವನ್ನು

ಎಸಗಬಾರದು. ಸುಖ ಸಂಪತ್ತಿನ ಕಾಲದಲ್ಲಿ ಜತೆಗಿದ್ದು, ಅವರಿಗೆ ದುರ್ಭರ ಗಳಿಗೆ ಬಂದಾಗ ಅವರಿಂದ ದೂರವಾಗದೇ ಅವರ ಜೊತೆಗೇ ಇದ್ದು ಉಪಕಾರಸ್ಮರಣೆ ಮಾಡಬೇಕು ಎನ್ನುವ ಗಿಳಿಯ ನಡತೆಯನ್ನು ಮಾನವರಾದ ನಾವು ಕಲಿಯಬೇಕಾಗಿದೆ.

## ಈ. ಸಂದರ್ಭದೊಂದಿಗೆ ವಿವರಿಸಿರಿ:

**1. "ಇಂಥಾ ಒಣಮರದಲ್ಲಿ ಏಕೆ ವಾಸ ಮಾಡುತ್ತಿದ್ದೀಯ."**

**ಉತ್ತರ:** ಈ ವಾಕ್ಯವನ್ನು 'ಅ. ರಾ. ಮಿತ್ರ' ಅವರು ಬರೆದಿರುವ 'ಮಹಾಭಾರತ(ವ್ಯಾಸ) ಪಾತ್ರ–ಪ್ರಸಂಗಗಳು' ಎಂಬ ಕೃತಿಯಿಂದ ಆಯ್ದ 'ಒಣಮರದ ಗಿಳಿ' ಎಂಬ ಗದ್ಯ ಭಾಗದಿಂದ ಆರಿಸಲಾಗಿದೆ.

**ಸಂದರ್ಭ:** ಈ ವಾಕ್ಯವನ್ನು ಇಂದ್ರನು ಒಣಗಿದ ಮರದಲ್ಲಿ ವಾಸವಾಗಿದ್ದ ಗಿಳಿಯನ್ನು ನೋಡಿ ಕೇಳಿದನು.

**ವಿವರಣೆ:** ಯಾವುದೇ ಪಕ್ಷಿಗಳಾದರೂ ಹಸಿರಿನಿಂದ ಕೂಡಿದ ಹಣ್ಣು–ಹೂಗಳಿಂದ ತುಂಬಿದ ದಟ್ಟವಾದ ಸುಂದರವಾದ ಮರದಲ್ಲಿ ವಾಸಿಸುವುದನ್ನು ಅಪೇಕ್ಷಿಸುತ್ತದೆ. ಆದರೆ ಈ ಗಿಳಿಯು ಒಂದೇ ಒಂದು ಎಲೆಯೂ ಇರದ, ರೋಗಗ್ರಸ್ಥ, ಒಣಗಿದ ಮರದ ಮೇಲೆ ವಾಸವಾಗಿರುವುದನ್ನು ಕಂಡ ಇಂದ್ರನು ಗಿಳಿಯನ್ನು ಕರೆದು ಮೇಲಿನ ಮಾತನ್ನು ಹೇಳುತ್ತಾನೆ.

**ವಿಶೇಷತೆ:** ಪುಷ್ಪವಿರದ, ಫಲ – ಹಸಿರಿನ ಸಮೃದ್ಧಿ ಇರದ ಮರದಲ್ಲಿ ಗಿಳಿಯು ಈಗಲೂ ವಾಸವಾಗಿರುವುದು ಗಿಳಿಯಲ್ಲಿನ ವಿಶಿಷ್ಟ ಗುಣವನ್ನು ತೋರಿಸಿದೆ.

**2. "ಏನಾದರೂ ವರವನ್ನು ಕೇಳು ಕೊಡುತ್ತೇನೆ."**

**ಉತ್ತರ:** ಈ ವಾಕ್ಯವನ್ನು 'ಅ. ರಾ. ಮಿತ್ರ' ಅವರು ಬರೆದಿರುವ 'ಮಹಾಭಾರತ(ವ್ಯಾಸ) ಪಾತ್ರ–ಪ್ರಸಂಗಗಳು' ಎಂಬ ಕೃತಿಯಿಂದ ಆಯ್ದ 'ಒಣಮರದ ಗಿಳಿ' ಎಂಬ ಗದ್ಯ ಭಾಗದಿಂದ ಆರಿಸಲಾಗಿದೆ.

**ಸಂದರ್ಭ:** ಈ ಮೇಲಿನ ಮಾತನ್ನು ಇಂದ್ರನು ಗಿಳಿಯ ಪರಹಿತಾಕಾಂಕ್ಷಿಯನ್ನು ಮೆಚ್ಚಿ ಹೇಳಿದನು.





**ವಿವರಣೆ:** 'ಸುಖ ಸಂಪತ್ತಿನ ಕಾಲದಲ್ಲಿ ಜತೆಗಿದ್ದವರು ದುರ್ಭರ ಗಳಿಗೆಯಲ್ಲಿಯೂ ಕೂಡ ಅವರ ಜೊತೆಗೇ ಇದ್ದು ಉಪಕಾರಸ್ಮರಣೆ ಮಾಡಬೇಕು' ಎಂಬ ಗಿಳಿಯ ತತ್ವನಿಷ್ಠೆಯನ್ನು ಮೆಚ್ಚಿದ ಇಂದ್ರನು ಪರಹಿತಾಕಾಂಕ್ಷಿಯಾಗಿರುವ ಗಿಳಿರಾಯನಿಗೆ ಏನಾದರೂ ವರವನ್ನು ಕೊಡಬೇಕು ಎಂದು ತೀರ್ಮಾನಿಸಿ ಮೇಲಿನ ಮಾತನ್ನು ಹೇಳುತ್ತಾನೆ.

**ವಿಶೇಷತೆ:** ಗಿಳಿಯಲ್ಲಿನ ತತ್ವನಿಷ್ಠೆ ಹಾಗೂ ಪರಹಿತಾಕಾಂಕ್ಷೆಯ ಗುಣದ ವಿಶೇಷತೆಯನ್ನು ಇಲ್ಲಿ ಕಾಣಬಹುದಾಗಿದೆ.

**3. "ಅದರ ಈಗಿನ ಅವಸ್ಥೆಯನ್ನು ನಾನು ನೋಡಲಾರೆ."**

**ಉತ್ತರ:** ಈ ವಾಕ್ಯವನ್ನು 'ಅ. ರಾ. ಮಿತ್ರ' ಅವರು ಬರೆದಿರುವ 'ಮಹಾಭಾರತ(ವ್ಯಾಸ) ಪಾತ್ರ–ಪ್ರಸಂಗಗಳು' ಎಂಬ ಕೃತಿಯಿಂದ ಆಯ್ದ 'ಒಣಮರದ ಗಿಳಿ' ಎಂಬ ಗದ್ಯ ಭಾಗದಿಂದ ಆರಿಸಲಾಗಿದೆ.

**ಸಂದರ್ಭ:** ಇಂದ್ರನಿಂದ ವರವನ್ನು ಪಡೆಯುವ ಸಂದರ್ಭದಲ್ಲಿ ಗಿಳಿಯು ಇಂದ್ರನಿಗೆ ಮೇಲಿನ ಮಾತನ್ನು ಹೇಳಿತು.

**ವಿವರಣೆ:** ಗಿಳಿಯ ತತ್ವನಿಷ್ಠೆಯನ್ನು ಮೆಚ್ಚಿದ ಇಂದ್ರನು ಅದಕ್ಕೆ ಏನಾದರೂ ವರವನ್ನು ಕೊಡಬೇಕೆಂದು ತೀರ್ಮಾನಿಸಿ, 'ಏನಾದರು ವರವನ್ನು ಕೇಳು ಕೊಡುತ್ತೇನೆ' ಎಂದನು. ಆಗ ಗಿಳಿಯು 'ದೇವರಾಜ ವರವನ್ನು ಕೊಡುವ ಇಚ್ಛೆ ಇದ್ದರೆ ಆ ಮರಕ್ಕೆ ಮೊದಲಿನಂತೆ ಹಸಿರಿನಿಂದ ಕಳಕಳಿಸುವ ಫಲಪುಷ್ಪ ಭಾರದಿಂದ ಬೀಗುವ, ನೆರಳು ಕೊಡುವ ವರವನ್ನು ದಯಪಾಲಿಸು, ಅದರ ಈಗಿನ ಅವಸ್ಥೆಯನ್ನು ನೋಡಲಾರೆ' ಎಂದು ಹೇಳುವಾಗ ಮೇಲಿನ ಮಾತು ಬಂದಿದೆ.

**ವಿಶೇಷತೆ:** ಗಿಳಿಗೆ ಯಾವುದೇ ವರವನ್ನು ಪಡೆಯುವ ಅವಕಾಶವಿದ್ದರೂ, ಅದು 'ತಾನು ವಾಸವಾಗಿರುವ ಈ ಒಣ ಮರವು ಮೊದಲಿನಂತಾಗಲಿ' ಎಂಬ ಅದರ ಪರಹಿತಾಕಾಂಕ್ಷೆಯ ಗುಣ ವಿಶೇಷತೆ ಇಲ್ಲಿ ವ್ಯಕ್ತವಾಗಿದೆ.



# DSERT SOLUTIONS

VIDWATH™ INNOVATIVE SOLUTIONS PVT. LTD

## ಗದ್ಯ – 1 | ಒಣ ಮರದ ಗಿಳಿ

### ಭಾಷಾಭ್ಯಾಸ

**ಅ. ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ:**

ಅ. ಆಶ್ರಯ : ಆಸರೆ :: ವರ್ಣ : ಬಣ್ಣ

ಆ. ಉಪಕಾರ : ಅಪಕಾರ :: ಅದೃಷ್ಟ : ದುರಾದೃಷ್ಟ

ಇ. ಗುರಿಯಾಗು : ಆಗಮ ಸಂಧಿ :: ಪರಹಿತಾಕಾಂಕ್ಷಿ : ಸವರ್ಣಧೀರ್ಘಸಂಧಿ

ಈ. ಜಿಂಕೆ : ರೂಢನಾಮ :: ಇಂದ್ರ : ಅಂಕಿತನಾಮ

ಉ. ಕೃತಜ್ಞತೆ : ಉಪಕಾರ ಸ್ಮರಣೆ :: ಕೃತಘ್ನತೆ : ಉಪಕಾರ ಸ್ಮರಣೆ ಮಾಡದಿರುವುದು

**ಆ. ಕೆಳಗಿನ ಪದಗಳನ್ನು ಬಿಡಿಸಿ ಸಂಧಿ ಹೆಸರಿಸಿರಿ:**

ಅ. ಬೆನ್ನಟ್ಟು – ಬೆನ್ನು + ಅಟ್ಟು = ಲೋಪಸಂಧಿ

ಆ. ಬಾಣವನ್ನು – ಬಾಣ + ಅನ್ನು = ಆಗಮ ಸಂಧಿ (ವಕಾರಾಗಮಸಂಧಿ)

ಇ. ಕಾಶಿಯಲ್ಲಿ – ಕಾಶಿ + ಅಲ್ಲಿ = ಆಗಮ ಸಂಧಿ (ಯಕಾರಾಗಮಸಂಧಿ)

**ಇ. ಕೆಳಗಿನ ಪದಗಳಿಗೆ ತತ್ಸಮ-ತದ್ಭವ ರೂಪಗಳನ್ನು ಬರೆಯಿರಿ:**

ಅ. ರಾಯ – ರಾಜ

ಆ. ಸಿರಿ – ಶ್ರೀ

ಇ. ವರ್ಷ – ವರುಷ

ಈ. ಜನ್ಮ – ಜನುಮ

ಉ. ಆಶ್ಚರ್ಯ – ಅಚ್ಚರಿ

### ಈ. ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಬರೆಯಿರಿ:

**ಅ. ರೋಗ** × ನಿರೋಗ

**ಆ. ಬಡತನ** × ಸಿರಿತನ

**ಇ. ಕೃತಘ್ನ** × ಕೃತಜ್ಞ

**ಈ. ಫಲ** × ನಿಷ್ಫಲ

**ಉ. ಪರಹಿತ** × ಸ್ವಹಿತ

### ಉ. ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಪ್ರಯೋಗಿಸಿ ಬರೆಯಿರಿ:

**ಅ. ಉಪಕಾರ** – ಉಪಕಾರ ಮಾಡಿದವರಿಗೆ ಕೃತಜ್ಞರಾಗಿರಬೇಕು.

**ಆ. ಸ್ಮರಣೆ** – ಮಕ್ಕಳು ದೇವರ ಸ್ಮರಣೆಯನ್ನು ಮಾಡಲು ಕಲಿಯಬೇಕು.

**ಇ. ಪರಹಿತ** – ನಾವು ಯಾವಾಗಲೂ ಇನ್ನೊಬ್ಬರ ಪರಹಿತವನ್ನು ಬಯಸಬೇಕು.

**ಈ. ಕೃತಜ್ಞ** – ನಾವು ಯಾವಾಗಲೂ ಹೆತ್ತವರಿಗೆ ಕೃತಜ್ಞರಾಗಿರಬೇಕು.

**ಉ. ಸಮೃದ್ಧಿ** – ಲಾಲ್‌ಬಾಗಿನ ಪುಷ್ಪ ಸಮೃದ್ಧಿ ಮನಸ್ಸಿಗೆ ಮುದವನ್ನು ನೀಡುತ್ತದೆ.

**ಊ. ಆಶ್ಚರ್ಯ** – ನಾನು ನನ್ನ ಕನಸಿನಲ್ಲಿ ದೇವರ ಪ್ರತ್ಯಕ್ಷವಾದುದನ್ನು ಕಂಡು ಆಶ್ಚರ್ಯಗೊಂಡೆನು.

**ಋ. ಸಂಪಾದಿಸು** – ಹಣ ಸಂಪಾದಿಸುವುದೇ ಜೀವನದ ಮುಖ್ಯ ಧ್ಯೇಯವಾಗಿರಬಾರದು.

## ಸೈದ್ಧಾಂತಿಕ ವ್ಯಾಕರಣ

**ಗುಣಿತಾಕ್ಷರಗಳು:** ವ್ಯಂಜನಗಳಿಗೆ ಸ್ವರಾಕ್ಷರಗಳು ಸೇರಿ ಆಗುವ ಅಕ್ಷರಗಳನ್ನು ಗುಣಿತಾಕ್ಷರಗಳು ಎನ್ನುತ್ತೇವೆ.

| | | | | |
|---|---|---|---|---|
| **ಉದಾ : ವ್ಯಂಜನ** | + | **ಸ್ವರ** | = | **ಗುಣಿತಾಕ್ಷರ** |
| ಕ್ | + | ಅ | = | ಕ |

ಚ್ + ಆ = ಚಾ

ಟ್ + ಇ = ಟಿ

ತ್ + ಈ = ತೀ

ಈ ರೀತಿ ಎಲ್ಲಾ ವ್ಯಂಜನಗಳಿಗೂ ಸ್ವರಗಳನ್ನು ಸೇರಿಸಿ ಗುಣಿತಾಕ್ಷರಗಳನ್ನು ಮಾಡಬಹುದು.

**ಸಂಯುಕ್ತಾಕ್ಷರಗಳು:**

ಎರಡು ಅಥವಾ ಎರಡಕ್ಕಿಂತ ಹೆಚ್ಚು ವ್ಯಂಜನಗಳಿಗೆ ಒಂದು ಸ್ವರ ಸೇರಿ ಆಗುವ ಅಕ್ಷರವನ್ನು ಸಂಯುಕ್ತಾಕ್ಷರ ಅಥವಾ ಒತ್ತಕ್ಷರ ಎಂದು ಕರೆಯಲಾಗುತ್ತದೆ. ಇವುಗಳಲ್ಲಿ ಸಜಾತಿಯ ಸಂಯುಕ್ತಾಕ್ಷರ ಹಾಗೂ ವಿಜಾತಿಯ ಸಂಯುಕ್ತಾಕ್ಷರಗಳೆಂದು ಎರಡು ವಿಧಗಳಿವೆ.

1. **ಸಜಾತಿಯ ಸಂಯುಕ್ತಾಕ್ಷರ:** ಒಂದೇ ಜಾತಿಯ (ಮೂಲದ) ಎರಡು ವ್ಯಂಜನಗಳೊಂದಿಗೆ ಒಂದು ಸ್ವರ ಸೇರಿದಾಗ ಸಜಾತಿಯ ಸಂಯುಕ್ತಾಕ್ಷರ ಉಂಟಾಗುತ್ತದೆ.

ಉದಾ: ಅಮ್ಮ, ಅಣ್ಣ, ಕಲ್ಲು, ಮಣ್ಣು, ಕನ್ನಡ, ಸದ್ದು.

2. **ವಿಜಾತಿಯ ಸಂಯುಕ್ತಾಕ್ಷರ:** ಎರಡು ಅಥವಾ ಎರಡಕ್ಕಿಂತ ಹೆಚ್ಚು ವ್ಯಂಜನಗಳ ಜತೆಯಲ್ಲಿ ಒಂದು ಸ್ವರ ಸೇರಿದಾಗ ವಿಜಾತಿಯ ಸಂಯುಕ್ತಾಕ್ಷರ ಉಂಟಾಗುತ್ತದೆ.

ಉದಾ: ಶಾಸ್ತ್ರ, ಸ್ತ್ರೀ, ಅಕ್ಷರ, ವಿದ್ಯೆ, ಕಷ್ಟ, ತ್ರಿಶೂಲ.

**ಸಂಧಿಗಳು:**

ಎರಡು ಧ್ವನಿಘಟಕಗಳ ನಡುವಿನ ಎರಡು ಅಕ್ಷರಗಳು ಪರಸ್ಪರ ಕಾಲ ವಿಳಂಬವಾಗದಂತೆ ಅರ್ಥಕ್ಕೆ ಅನುಸಾರವಾಗಿ ಸೇರುವುದನ್ನು 'ಸಂಧಿ' ಎಂದು ಕರೆಯಲಾಗುತ್ತದೆ.

**ಕನ್ನಡ ಸಂಧಿಗಳು:**

ಸಂಧಿ ಆಗುವ ಎರಡು ಧ್ವನಿಘಟಕಗಳು ಕನ್ನಡ, ಇಲ್ಲವೇ ಒಂದು ಕನ್ನಡ ಮತ್ತೊಂದು ಸಂಸ್ಕೃತವಾಗಿದ್ದರೆ ಅದನ್ನು 'ಕನ್ನಡ ಸಂಧಿ' ಎಂದು ಕರೆಯಲಾಗುತ್ತದೆ. ಕನ್ನಡ ಸಂಧಿಯಲ್ಲಿ ಮೂರು ವಿಧಗಳಿವೆ.

**1. ಲೋಪ ಸಂಧಿ:** ಎರಡು ಸ್ವರಾಕ್ಷರಗಳ ನಡುವೆ ಸಂಧಿ ಕಾರ್ಯ ನಡೆಯುವಾಗ ಪೂರ್ವ ಪದದ ಅಂತ್ಯದಲ್ಲಿರುವ ಸ್ವರವು ಅರ್ಥ ಕೆಡದಿರುವ ಸಂದರ್ಭದಲ್ಲಿ ಇಲ್ಲವಾಗುವುದನ್ನು 'ಲೋಪಸಂಧಿ' ಎಂದು ಕರೆಯಲಾಗುತ್ತದೆ.

| ಉದಾ: | ಪೂರ್ವಪದ | + | ಉತ್ತರಪದ | = ಸಂಧಿಪದ |
|---|---|---|---|---|
| | ಮಾತು | + | ಇಲ್ಲ | = ಮಾತಿಲ್ಲ |
| | ಬೇರೆ | + | ಒಬ್ಬ | = ಬೇರೊಬ್ಬ |
| | ನಿನಗೆ | + | ಅಲ್ಲದೆ | = ನಿನಗಲ್ಲದೆ |

**2. ಆಗಮ ಸಂಧಿ:** ಲೋಪ ಸಂಧಿ ಮಾಡಿದರೆ ಅರ್ಥ ಕೆಡುವಂತಿದ್ದರೆ, ಆ ಎರಡು ಸ್ವರಗಳ ನಡುವೆ 'ಯ್' ಇಲ್ಲವೆ 'ವ್' ಅಕ್ಷರವನ್ನು ಹೊಸದಾಗಿ ಸೇರಿಸಿ ಸಂಧಿ ಮಾಡಿದರೆ ಅದನ್ನು 'ಆಗಮ ಸಂಧಿ' ಎಂದು ಕರೆಯುತ್ತಾರೆ. 'ಯ್' ಅಕ್ಷರ ಬಂದಲ್ಲಿ ಯಕಾರಾಗಮ ಸಂಧಿ ಎಂತಲೂ, 'ವ್' ಅಕ್ಷರ ಬಂದಲ್ಲಿ ವಕಾರಾಗಮ ಸಂಧಿ ಎಂತಲೂ ಎರಡು ವಿಧಗಳನ್ನು ಗುರುತಿಸಲಾಗುತ್ತದೆ.

| ಉದಾ: | ಪೂರ್ವಪದ | + | ಉತ್ತರಪದ | = ಸಂಧಿಪದ |
|---|---|---|---|---|
| | ಗುರು | + | ಅನ್ನು | = ಗುರುವನ್ನು |
| | ಪಿತೃ | + | ಅನ್ನು | = ಪಿತೃವನ್ನು |
| | ಕೈ | + | ಅಲ್ಲಿ | = ಕೈಯಲ್ಲಿ |
| | ಶಾಲೆ | + | ಇಂದ | = ಶಾಲೆಯಿಂದ |





**3. ಆದೇಶ ಸಂಧಿ:** ಎರಡು ಅಕ್ಷರಗಳ ನಡುವೆ ಸಂಧಿಕಾರ್ಯ ನಡೆಯುವಾಗ ಉತ್ತರ ಪದದ ಆದಿಯಲ್ಲಿರುವ 'ಕ್' 'ತ್' 'ಪ್' ವ್ಯಂಜನಗಳಿಗೆ ಕ್ರಮವಾಗಿ 'ಗ್' 'ದ್' 'ಬ್' ವ್ಯಂಜನಗಳು ಬದಲಿಯಾಗಿ ಬರುವುದನ್ನು 'ಆದೇಶ ಸಂಧಿ' ಎಂದು ಕರೆಯಲಾಗುತ್ತದೆ.

| ಉದಾ: | ಪೂರ್ವಪದ | + | ಉತ್ತರಪದ | = ಸಂಧಿಪದ |
|---|---|---|---|---|
| | ಮಳೆ | + | ಕಾಲ | = ಮಳೆಗಾಲ |
| | ಬೆಟ್ಟ | + | ತಾವರೆ | = ಬೆಟ್ಟದಾವರೆ |
| | ಹೂ | + | ಪುಟ್ಟಿ | = ಹೂಬುಟ್ಟಿ |